Spl.C. 3/2020.

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.

## ವಿಶೇಷ ಸತ್ರ ಮೊಕದ್ದಮೆ ಸಂಖ್ಯೆಃ 3/2020.

| | | | |
|---|---|---|---|
| ಹೆಸರು | : | ಕಾಡಪ್ಪ ತಳಗೇರಿ | ಫ್ರಾಸಾ-11 |
| ತಂದೆಯ ಹೆಸರು | : | ಮಲೆಪ್ಪ | ಚಾಸಾ-21 |
| ವಯಸ್ಸು | : | 46 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಶಿರೋಳ, ತಾಃ ಮುಧೋಳ. | |

ದಿನಾಂಕಃ 02-04-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯ. ಚಾಸಾ-1 ರಿಂದ 4, 16 ರಿಂದ 20, 22 ರಿಂದ 27 ನನ್ನ ಸಂಬಂಧಿಕರು.

ಆ ದಿನ ನನ್ನ ಚಿಕ್ಕಪ್ಪನ ಮಗಳ ಆರೋಗ್ಯ ಸರಿ ಇರಲಿಲ್ಲ. ನಾನು ನೋಡಲು ಬಾಗಲಕೋಟೆ ಖಾಸಗಿ ದವಾಖಾನೆಗೆ ಬಂದಿದ್ದೆ, ಆಸ್ಪತ್ರೆ ಹೆಸರು ಗೊತ್ತಿಲ್ಲ. ಆಗ ನನಗೆ ವಿಠ್ಠಲ ಪೋನ್ ಮಾಡಿ ರೂ.30,000/- ಹಣ ನಮ್ಮ ಮನೆಯಲ್ಲಿ ಕೊಟ್ಟು ಬರುತ್ತೇನೆ ಮನೆಯಲ್ಲಿ ಯಾರು ಇದ್ದಾರೆ ಎಂದು ಕೇಳಿದ ಆಗ ಸಮಯ ಮದ್ಯಾಹ್ನ 2.30 ರಿಂದ 3.00 ಗಂಟೆಯಾಗಿತ್ತು. 4.30 ರಿಂದ 5.00 ಗಂಟೆಯಲ್ಲಿ ರೇಣುಕಾ ನನ್ನ ಮಗಳು ಪೋನ್ ಮಾಡಿದಳು. ಆಗ ನಾನು ಲೋಕಾಪುರ ಹತ್ತಿರವಿದ್ದೆ. ನನ್ನ ಅಜ್ಜ ಮತ್ತು ದೊಡ್ಡಪ್ಪನನ್ನು ಕೊಲೆ ಮಾಡಿದ್ದಾರೆ ಎಂದು ಹೇಳಿದಳು. ಯಾರು ಕಡಿದಿದ್ದಾರೆ ಎಂದು ಕೇಳಿದೆ ಆಗ ಅವಳು 13 ಜನರು ಇದ್ದರು ಎಂದು ಹೇಳಿದಳು. ಅವರ ಹೆಸರು 1. ಮಹೇಶ ನಾಗರೆಡ್ಡಿ, 2. ಕಿರಣ ನಾಗರೆಡ್ಡಿ, 3. ಸಿದ್ದು ನಾಗರೆಡ್ಡಿ, 4. ಕಾಡು ನಾಗರೆಡ್ಡಿ, 5. ಅರುಣ ನಾಗರೆಡ್ಡಿ, 6. ಗಿರಿಮಲ್ಲಯ್ಯ ಗಣಾಚಾರಿ, 7. ಶ್ರೀಶೈಲ ವಾಲಿಮರದ, 8. ಲಕ್ಷ್ಮಣ ಜಕ್ಕನ್ನವರ, ಉಳಿದವರ ಹೆಸರು ಗೊತ್ತಿಲ್ಲ.

ನನ್ನ ತಂದೆಯ ಮಲೆಪ್ಪನ ಕುತ್ತಿಗೆ ಕಟ್ ಆಗಿತ್ತು ಹಾಗೂ ಎರಡೂ ಭುಜಗಳನ್ನು ಕತ್ತರಿಸಿದ್ದರು. ನಂತರ ವಿಠ್ಠಲನ ದೇಹವನ್ನು ನೋಡಲಾಗಿ ಕಣ್ಣು, ಮೂಗು, ಬಾಯಿ ಹಾಗೂ ಕುತ್ತಿಗೆ ಕಡಿದಿದ್ದರು. ಕುತ್ತಿಗೆ ಸ್ವಲ್ಪ ಉಳಿದಿತ್ತು. ಆ ಸಮಯದಲ್ಲಿ ಸ್ಥಳದಲ್ಲಿ 100 ರಿಂದ 150 ಜನರು ಇದ್ದರು. ನನ್ನ ಮನೆ ತೋಟದಲ್ಲಿರುತ್ತದೆ.

ನನ್ನ ತಾಯಿ ನಾನು ಹೋದಾಗ ಹೇಳಿರುವುದೇನೆಂದರು ಆರೋಪಿತರು ಬಂದು ಹಣ ಕೊಟ್ಟು ಹೋಗುವಾಗ ನಿಮ್ಮ ತಂದೆ ಹಾಗೂ ವಿಠ್ಠಲನನ್ನು ಕೊಲ್ಲುತ್ತೇವೆ ಎಂದು ಹೇಳಿದರು ಅಂತಾ ಹೇಳಿದಳು ಹಾಗೂ ಬಹಳ ಜನರು ಇದ್ದರು ಕಡಿದು ಹೋದರು ಅಂತಾ ಹೇಳಿದಳು. ನಿಪಿ-5 ರಿಂದ 8 ಫೋಟೋಗಳನ್ನು ನೋಡಿ ಗುರುತಿಸಿದ್ದೇನೆ. ನಂತರ ನನ್ನನ್ನು ಮುಧೋಳದ ಸರ್ಕಾರಿ ಆಸ್ಪತೆಗೆ ಕರೆದುಕೊಂಡು ಹೋದರು. ಶವವನ್ನು ನನಗೆ ನೀಡಿದರು. ನಿಪಿ-13 ಫೋಟೋ ನೋಡಿದೆ ಅದು ವಿಠ್ಠಲನ ಗಾಡಿ ಇರುತ್ತದೆ. ನಿಪಿ-40 ರಿಂದ 45 ಫೋಟೋ ನೋಡಿ ಗುರುತಿಸಿದೆ. ಮುಮಾ-1 ರಿಂದ 6 ನೋಡಿ ಗುರುತಿಸಿದ್ದೇನೆ.

**<u>ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.</u>**

ಘಟನೆಯಾದ 20 ದಿನಗಳ ನಂತರ ಪೋಲಿಸರು ನನ್ನ ಹೇಳಿಕೆ ಪಡೆದಿದ್ದಾರೆ. ನನ್ನ ಹೇಳಿಕೆಯಲ್ಲಿ ಪೋಲಿಸರ ಮುಂದೆ ನಾನು 4.30-5.00 ಗಂಟೆಗೆ ರೇಣುಕಾ ಫೋನ್ ಮಾಡಿ ಕಾಕಾ ಮತ್ತು ದೊಡ್ಡಪ್ಪನಿಗೆ ಕೊಲೆ ಮಾಡಿದ್ದಾರೆ ಎಂಬ ವಿಷಯವನ್ನು ಬರೆಸಿಲ್ಲ ಎನ್ನುವುದು ಸರಿಯಲ್ಲ. 13 ಜನ ಆರೋಪಿತರ ಹೆಸರನ್ನು ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಿಲ್ಲ ಎನ್ನುವುದು ಸರಿಯಲ್ಲ, ನಾನು ಹೇಳಿದ್ದೇನೆ ಆದರೆ ಪೋಲಿಸರು ಬರೆದುಕೊಂಡಿಲ್ಲ. ನಾನು ನನ್ನ ತಂದೆಯ ಎರಡೂ ಭುಜ ಕತ್ತರಿಸಿದ್ದರು, ತಲೆ ಕತ್ತರಿಸಿದ್ದರು ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಿಲ್ಲ ಎನ್ನುವುದು ಸರಿಯಲ್ಲ. ವಿಠ್ಠಲ ಈತನ ಕಣ್ಣು, ಕಿವಿ, ಕುತ್ತಿಗೆ ಕತ್ತರಿಸಿದ್ದರು ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಿಲ್ಲ ಎನ್ನುವುದು ಸರಿಯಲ್ಲ. ನಾನು ಹೋದಾಗ ಸ್ಥಳದಲ್ಲಿ 150 ಜನರು ಇದ್ದರು ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ

ಹೇಳಿ ಬರೆಸಿಲ್ಲ ಎನ್ನುವುದು ಸರಿಯಲ್ಲ. ನನ್ನ ತಾಯಿಗೆ ಕೇಳಿದಾಗ ಅವಳು ಬಹಳ ಜನರು ಬಂದು ವಿಠ್ಠಲ ಮತ್ತು ನನ್ನ ತಂದೆಗೆ ಕೊಲೆ ಮಾಡುತ್ತೇವೆ ಎಂದು ಹೇಳಿದ್ದಾರೆ ಅಂತಾ ಹೇಳಿದಳು ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಿಲ್ಲ ಎನ್ನುವುದು ಸರಿಯಲ್ಲ. ನನ್ನ ತಾಯಿಯನ್ನು ಕೇಳಿದಾಗ ಮಲೆಪ್ಪ ಮತ್ತು ವಿಠ್ಠಲ ಶಿರೋಳ ಪ್ಲಾಟ್ ಕ್ರಾಸ ಹತ್ತಿರ ಮೋಟರ ಸೈಕಲ ಮೇಲಿಂದ ಬಿದ್ದು ಖಲ್ಲಾ ಆಗಿರುತ್ತಾರೆ ಎಂದು ಹೇಳಿ ಬರೆಯಿಸಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಡಿ-1 ಅಂತಾ ಗುರುತಿಸಲಾಯಿತು.

ವಿಠ್ಠಲ ತಳಗೇರಿ ಹಾಗೂ ಅಶೋಕ ತಳಗೇರಿ ಇವರ ಮೇಲೆ ಅಬಕಾರಿ ಕೇಸುಗಳು ದಾಖಲಾಗಿವೆ ಎನ್ನುವುದು ನನಗೆ ಗೊತ್ತಿಲ್ಲ. ಅಬಕಾರಿ ಅಧಿಕಾರಿಗಳು ರೇಡಿಗೆ ಬಂದಾಗ ಯಲ್ಲಪ್ಪ ತಳಗೇರಿ, ವಿಠ್ಠಲ ತಳಗೇರಿ ಹಾಗೂ ಅಶೋಕ ತಳಗೇರಿ ಹಲ್ಲೆ ಮಾಡಿದ್ದು ಆ ಕುರಿತು ಒಂದು ಕೇಸು ಇದೆ ಎನ್ನುವುದು ನನಗೆ ಗೊತ್ತಿಲ್ಲ. ಯಲ್ಲಪ್ಪ ತಳಗೇರಿ, ವಿಠ್ಠಲ ತಳಗೇರಿ ಹಾಗೂ ಅಶೋಕ ತಳಗೇರಿ ಅವರ ಮೇಲೆ ಕೊಲೆ ಕೇಸು ದಾಖಲಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ನನಗೆ ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ರೇಣುಕಾ ಪೋನ ಮಾಡಿ ವಿಷಯ ತಿಳಿಸಿದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರ ಹೆಸರನ್ನು ಸುಳ್ಳು ಬರೆಸಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾ-1 ರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

02-04-2024.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.

Spl.C. 3/2020.

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.**

**ವಿಶೇಷ ಸತ್ರ ಮೊಕದ್ದಮೆ ಸಂಖ್ಯೆ: 3/2020.**

| | | | |
|---|---|---|---|
| ಹೆಸರು | : | ಸದಾಶಿವ ತಳಗೇರಿ | ಪ್ರಾಸಾ-10 |
| ತಂದೆಯ ಹೆಸರು | : | ವಿಠ್ಠಲ | ಚಾಸಾ-23 |
| ವಯಸ್ಸು | : | 23 ವರ್ಷ | |
| ಉದ್ಯೋಗ | : | ದ್ವಿದ.ಸ | |
| ವಾಸಸ್ಥಳ | : | ಶಿರೋಳ, ತಾಃ ಮುಧೋಳ. | |

ದಿನಾಂಕಃ 02-04-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯ. ಚಾಸಾ-1 ರಿಂದ 4, 16 ರಿಂದ 27 ನನ್ನ ಸಂಬಂಧಿಕರು. ದಿನಾಂಕಃ 15-10-2019 ರಂದು ನಾನು ಮನೆಯಲ್ಲಿ ಫೇಸ್ ಬುಕ್ ನೋಡುತ್ತ ಕುಳಿತಿದ್ದೆ. ನನ್ನ ತಾಯಿ ಮತ್ತು ಅಜ್ಜಿ ಶೆಂಗಾ ಒಡೆಯುತ್ತ ಕುಳಿತಿದ್ದರು. ನನ್ನ ಚಿಕ್ಕಪ್ಪ ಅಶೋಕ ತಳಗೇರಿ ಬಂದು ವಿಠ್ಠಲ ಮತ್ತು ಮಲಿಬಸಪ್ಪ ಬಂದು ಕೊಲೆ ಮಾಡಿದ್ದಾರೆ ಎಂದು ಹೇಳಿದ. ನಂತರ ನಾವು ಗಾಬರಿಯಾಗಿ ಓಡಿ ಹೋಗಿ ನೋಡಿದೆವು. ನನ್ನ ತಂದೆ ವಿಠ್ಠಲ ಇವರು ಗಣಿಯವರ ತೋಟದ ಪಕ್ಕದ ನೀರಿನ ಹರಿಯ ಕಂಟಿಯಲ್ಲಿ ಬಿದ್ದಿದ್ದರು. ನನ್ನ ತಂದೆಗೆ ತಲ್ವಾರಿನಿಂದ ತಲೆಯಿಂದ ಬಾಯಿವರೆಗೆ ಬಲಗಡೆ ಕೊಚ್ಚಿದ್ದರು, ಬಲಗಣ್ಣು ಮತ್ತು ಬಲಕಿವಿ ಕೊಚ್ಚಿದ್ದರು, ಬಲಗೈ ಮೊಣಕೈ ಕೊಚ್ಚಿದ್ದರು. ನನ್ನ ತಂದೆಯ ಬಲಗಡೆ ಕುತ್ತಿಗೆ ಸ್ವಲ್ಪ ಉಳಿದಿತ್ತು. ನನ್ನ ತಂದೆಯ ಬಟ್ಟೆ ಎಲ್ಲ ರಕ್ತಮಯವಾಗಿತ್ತು ಹಾಗೂ ನನ್ನ ತಂದೆಯ ಹೆಬ್ಬೆರಳು ಹಾಗೂ ಕಿರುಬೆರಳು ಕತ್ತರಿಸಿದ್ದವು. ನನ್ನ ತಂದೆಯ ಹೊಂಡಾ ಶೈನ್ ಗಾಡಿ, ಚಪ್ಪಲಿ ಹಾಗೂ ಕಾರಿನ ನಂಬರ ಪ್ಲೇಟ್ ಅಲ್ಲಿ ಬಿದ್ದಿದ್ದವು.

ನನ್ನ ಅಜ್ಜ ಮಲ್ಲಪ್ಪ ತಳಗೇರಿ ಕಲ್ಲೋಳಿಗೆ ಹೋಗುವ ರೋಡಿನಲ್ಲಿ ಅಂಗಾತ ಬಿದ್ದಿದ್ದರು, ಅವರ ಎಡಗಡೆ ಕತ್ತು ಕತ್ತರಿಸಿತ್ತು, ಘಟನೆ ಬಗ್ಗೆ ಕಾಂಚನಾ ಎನ್ನುವವರು ನನಗೆ 3.20 ಘಟನೆಯಾಗಿದೆ ಎಂದು ಹೇಳಿದರು.

13 ಜನರು ಒಂದು ಕಾರು, ಎರಡು ಬೈಕು ಮತ್ತು ಒಂದು ಬುಲೆಟ್ ನಲ್ಲಿ ಬಂದು ನನ್ನ ತಂದೆಯನ್ನು ಕೊಚ್ಚಿದರು ಎಂದು ಹೇಳಿದಳು. ಅವರ ಹೆಸರು 1. ಮಲ್ಲಪ್ಪ ಶಿವಪ್ಪ ಹುದ್ದಾರ, 2. ಶಂಕರ ಗುಡದಿನ್ನಿ, 3. ರಾಜು ಮುಚ್ಚಂಡಿ, 4. ಗಿರಿಮಲ್ಲಯ್ಯ ಗಣಾಚಾರಿ, 5. ಅರುಣ ನಾಗರೆಡ್ಡಿ 6. ಕಿರಣ ನಾಗರೆಡ್ಡಿ 7. ಮಹೇಶ ನಾಗರೆಡ್ಡಿ 8. ಸಿದ್ದು ನಾಗರೆಡ್ಡಿ , 9. ಕಾಡಪ್ಪ ನಾಗರೆಡ್ಡಿ 10. ಶ್ರೀಶೈಲ ದುಂಡಪ್ಪ ವಾಲಿಮರದ, 11. ಲಕ್ಷ್ಮಣ ಜಕ್ಕನ್ನವರ ಹಾಗೂ ಇತರರ ಹೆಸರು ನೆನಪಿಲ್ಲ. ಅವರು ನನ್ನ ತಂದೆ ಮತ್ತು ಅಜ್ಜನನ್ನು ಕೊಲೆ ಮಾಡಿದ್ದಾರೆ ಅಂತಾ ಕಾಂಚನಾ ಮತ್ತು ರೇಣುಕಾ ನನಗೆ ಹೇಳಿದರು.

ದಿನಾಂಕಃ 30-11-2019 ರಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. ಸದರಿ ಕೊಲೆ ದಿನಾಂಕಃ 08-05-2019 ರಂದು ಯಲ್ಲಪ್ಪ ತಳಗೇರಿ ಇವರಿಗೆ ಆರೋಪಿತರು ತಲ್ವಾರನಿಂದ ಕೊಚ್ಚಿದ್ದರು, ಅದನ್ನು ನನ್ನ ತಂದೆ ನೋಡಿರುವುದರಿಂದ ಜಾಮೀನಿನ ಮೇಲೆ ಬಂದು ನನ್ನ ತಂದೆಯನ್ನು ಕೊಂದಿದ್ದಾರೆ. ನಿಪಿ-5 ರಿಂದ 8 ಪೋಟೋಗಳನ್ನು ನೋಡಿ ಗುರುತಿಸಿದ್ದೇನೆ. ಮುಮಾ-2,5,6 ನೋಡಿ ಗುರುತಿಸಿದ್ದೇನೆ. ನಿಪಿ-39 ರಿಂದ 45 ಪೋಟೋಗಳನ್ನು ನೋಡಿ ಗುರುತಿಸಿದ್ದೇನೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ. ಎಸ್.ಸಿ.ಹೆಚ್ ವಕೀಲರಿಂದ.**

ದಿನಾಂಕಃ 30-11-2019 ರಂದು ಪೋಲಿಸರ ಮುಂದೆ ನನ್ನ ಹೇಳಿಕೆಯಲ್ಲಿ ಆರೋಪಿತರು ನನ್ನ ತಂದೆಯ ಬಲಗಣ್ಣು ಮತ್ತು ಬಲಕಿವಿಗೆ ಮತ್ತು ಬಲಮೊಣಕೈಗೆ ಕೊಚ್ಚಿದ್ದರು ಹಾಗೂ ನನ್ನ ತಂದೆಯ ಕುತ್ತಿಗೆ ಸ್ವಲ್ಪ ಉಳಿದಿತ್ತು, ಹೆಬ್ಬೆರಳು ಮತ್ತು ಕಿರುಬೆರಳು ಕತ್ತರಿಸಿತ್ತು ಮತ್ತು ಬಟ್ಟೆಗೆ ರಕ್ತದ ಕಲೆಯಾಗಿತ್ತು ಮತ್ತು ನನ್ನ ತಂದೆಯ ಹೊಂಡಾ ಶೈನ್ ವಾಹನ ಸ್ಥಳದಲ್ಲಿತ್ತು, ಚಪ್ಪಲಿ ಮತ್ತು ಕಾರಿನ ನಂಬರ ಪ್ಲೇಟ ಸ್ಥಳದಲ್ಲಿ ಬಿದ್ದಿದ್ದವು ಎಂದು ಹೇಳಿಲ್ಲ ಎನ್ನುವುದು ನಿಜ ಸಾಕ್ಷಿ ಗಾಬರಿಯಲ್ಲಿ ಹೇಳಿಲ್ಲ ಎನ್ನುತ್ತಾರೆ.

ಹಾಗೂ ಮಲ್ಲಪ್ಪ ತಳಗೇರಿ ಇವರು ಕಲ್ಲೋಳಿಗೆ ಹೋಗುವ ರಸ್ತೆಯಲ್ಲಿ ಅಂಗಾತ ಬಿದ್ದಿದ್ದ ಹಾಗೂ ಎಡಗಡೆ ಕತ್ತು ಕತ್ತರಿಸಿತ್ತು, ಕಾಂಚನಾ 13 ಜನರು 2 ಬೈಕು,

ಕಾರು ಮತ್ತು ಒಂದು ಬುಲೆಟನಲ್ಲಿ ಬಂದಿದ್ದರು ಅಂತಾ ಹೇಳಿದಳು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ನಿಜ ಸಾಕ್ಷಿ ಗಾಬರಿಯಲ್ಲಿ ಹೇಳಿಲ್ಲ ಎನ್ನುತ್ತಾರೆ ಹಾಗೂ ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ 11 ಜನರ ಹೆಸರನ್ನು ನನ್ನ ಹೇಳಿಕೆಯಲ್ಲಿ ಹೇಳಿ ಬರೆಯಿಸಿಲ್ಲ ಎನ್ನುವುದು ಸರಿಯಲ್ಲ. ಸದರಿ ವಿಷಯವನ್ನು ಕಾಂಚನಾ ಮತ್ತು ರೇಣುಕಾ ನನ್ನ ಮುಂದೆ ಹೇಳಿದ್ದರು ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಬರೆಯಿಸಿಲ್ಲ ಎನ್ನುವುದು ಸರಿಯಲ್ಲ. ದಿನಾಂಕಃ 08-05-2019 ರಂದು ಆರೋಪಿತರು ಯಲ್ಲಪ್ಪ ತಳಗೇರಿ ಇವನಿಗೆ ತಲ್ವಾರನಿಂದ ಹೊಡೆದಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿ ಬರೆಯಿಸಿಲ್ಲ ಎನ್ನುವುದು ನಿಜ ಹಾಗೂ ಜಾಮೀನಿನ ಮೇಲೆ ಬಂದ ನಂತರ ಹಳೇ ದ್ವೇಷ ಇಟ್ಟುಕೊಂಡು ಕೊಲೆ ಮಾಡಿದ್ದಾರೆ ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿ ಬರೆಯಿಸಿಲ್ಲ ಎನ್ನುವುದು ಸರಿಯಲ್ಲ. ಹಿಂದಿನ ದ್ವೇಷ ಹಾಗೂ ಜಾತಿನಿಂದನೆಯಿಂದ ಘಟನೆಯಾಗಿದೆ ಎಂಬ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿ ಬರೆಯಿಸಿಲ್ಲ ಎನ್ನುವುದು ಸರಿಯಲ್ಲ.

ಯಲ್ಲಪ್ಪ ತಳಗೇರಿ, ವಿಠ್ಠಲ ತಳಗೇರಿ ಹಾಗೂ ಅಶೋಕ ತಳಗೇರಿ ಇವರ ಮೇಲೆ ಅಬಕಾರಿ ಕೇಸುಗಳು ದಾಖಲಾಗಿವೆ ಎನ್ನುವುದು ನನಗೆ ಗೊತ್ತಿಲ್ಲ. ಅಬಕಾರಿ ಅಧಿಕಾರಿಗಳು ರೇಡಿಗೆ ಬಂದಾಗ ಯಲ್ಲಪ್ಪ ತಳಗೇರಿ, ವಿಠ್ಠಲ ತಳಗೇರಿ ಹಾಗೂ ಅಶೋಕ ತಳಗೇರಿ ಹಲ್ಲೆ ಮಾಡಿದ್ದು ಆ ಕುರಿತು ಒಂದು ಕೇಸು ಇದೆ ಎನ್ನುವುದು ನನಗೆ ಗೊತ್ತಿಲ್ಲ. ಯಲ್ಲಪ್ಪ ತಳಗೇರಿ, ವಿಠ್ಠಲ ತಳಗೇರಿ ಹಾಗೂ ಅಶೋಕ ತಳಗೇರಿ ಅವರ ಮೇಲೆ ಕೊಲೆ ಕೇಸು ದಾಖಲಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಅವರಿಗೆ ಹಾಗೂ ಸಾಕಷ್ಟು ಜನರ ನಡುವೆ ಊರಲ್ಲಿ ವೈಮನಸ್ತು ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ಘಟನೆ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಕಾಂಚನಾ ಮತ್ತು ರೇಣುಕಾ ವಿಷಯ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

02-04-2024.
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.